**ಕರ್ನಾಟಕ ಸರ್ಕಾರ**

**ವಿಷಯ:** ಒಳಾಡಳಿತ ಇಲಾಖೆ (ರಹದಾರಿ ಮತ್ತು ವಿದೇಶಿಯರು) ಶಾಖೆಯು ತೆರಿಗೆಯೇತರ ಆದಾಯದ ದರಗಳನ್ನು ಪರಿಷ್ಕರಿಸುವ ಹಾಗೂ ವಿಧಿಸುವ ಕುರಿತು ಆದೇಶ.

**ಓದಲಾಗಿದೆ:** 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಆಇ 30 ಉಕಾ (ಆ&ಸಂ)/2017, ದಿನಾಂಕ: 11.08.2017.

2. ಡಿಜಿ ರವರ ಪತ್ರ ಬಿಯುಡಿ-6/05/2017-18, ದಿನಾಂಕ: 20.03.2018.

**ಪ್ರಸ್ತಾವನೆ:**

ಮೇಲೆ ಓದಲಾದ (1)ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರು ಯಾವ ಯಾವ ಕ್ಷೇತ್ರಗಳಲ್ಲಿ ತೆರಿಗೆಯೇತರ ಆದಾಯಗಳನ್ನು ಸಂಗ್ರಹಿಸಬಹುದು ಹಾಗೂ ತೆರಿಗೆಯೇತರ ಆದಾಯಗಳನ್ನು ಹಣದುಬ್ಬರ ಸೂಚ್ಯಂಕ (Cost Inflation Index) ಅರಣ್ಯ ಇಲಾಖೆಯು ಮಾಡಿರುವ ಅಭ್ಯಾಸಗಳನ್ನು ಉದಾಹರಣೆಗಾಗಿ ಸಲ್ಲಿಸುತ್ತಾ, ಸೂಕ್ತ ಪರಿಷ್ಕರಣೆ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಮಾನ್ಯ ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರು ಒಳಾಡಳಿತ ಇಲಾಖೆಯ (ರಹದಾರಿ ಮತ್ತು ವಿದೇಶಿಯರು) ಶಾಖೆಯ ತೆರಿಗೆಯೇತರ ಆದಾಯಗಳನ್ನು ವಿಧಿಸುವ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದ್ದರಿಂದ ಶುಲ್ಕವನ್ನು ವಿಧಿಸಲು ಹಾಗೂ ಪರಿಷ್ಕರಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 128 ಪಿಎಂಎಸ್ 2018, ಬೆಂಗಳೂರು ದಿನಾಂಕ: 06.04.2018**

ಒಳಾಡಳಿತ ಇಲಾಖೆಯ (ರಹದಾರಿ ಮತ್ತು ವಿದೇಶಿಯರು) ಶಾಖೆಯು ತೆರಿಗೆಯೇತರ ಆದಾಯದ ದರಗಳನ್ನು ಈ ಕೆಳಗಿನಂತೆ ಹಣದುಬ್ಬರ ಸೂಚ್ಯಂಕ (Cost Inflation Index) ವೆಚ್ಚಗಳನ್ವಯ ಪರಿಷ್ಕರಿಸುವ ಹಾಗೂ ವಿಧಿಸಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರ. ಸಂ. | ತೆರಿಗೆಯೇತರ ಶುಲ್ಕದ ಉದ್ದೇಶ | ಪ್ರಸ್ತುತ ದರ | ಯಾವ ಸಾಲಿನಲ್ಲಿ ದರ ನಿಗಧಿಪಡಿಸಲಾಗಿದೆ | 2018ನೇ ಸಾಲಿಗೆ ಪ್ರಸ್ತಾಪಿಸಲಾಗಿರುವ ದರ | ಶೇಕಡವಾರು ಹೆಚ್ಚಳ | ಯಾವ ಲೆಕ್ಕ ಶೀರ್ಷಿಕೆಯಡಿ ಬರುತ್ತದೆ |
|---|---|---|---|---|---|---|
| 1. | ಉನ್ನತ ವ್ಯಾಸಂಗಕ್ಕಾಗಿ ವಿದೇಶಗಳಿಗೆ ತೆರಳಲು ಪೊಲೀಸ್ ನಿರಾಕ್ಷೇಪಣಾ ಪತ್ರ (ವಿದ್ಯಾರ್ಥಿ ವೀಸಾ/ ವಿದೇಶಿಯರಿಗೆ ಪೊಲೀಸ್ ನಿರಾಕ್ಷೇಪಣಾ ಪತ್ರ) (PCC) | ರೂ 200/- | 2004 | ರೂ. 1000/- | 400% | 0055-00-103-0-03 |
| 2. | ಟಿಬೆಟಿಯನ್ನರಿಗೆ ಭಾರತಕ್ಕೆ ವಾಪಸ್ಸಾಗಲು ನಿರಾಕ್ಷೇಪಣಾ ಪತ್ರ | ಇಲ್ಲ | - | ರೂ. 1000/- | - | 0055-00-800-0-01 |
| 3. | ಭಾರತೀಯ ಕ್ರಿಶ್ಚಿಯನ್ ವಿವಾಹ ಕಾಯ್ದೆ 1872ರ ಅಡಿಯಲ್ಲಿ ವಿವಾಹ ಪರವಾನಗಿ, ವಿವಾಹ ನೋಂದಣಾಧಿಕಾರಿ ನೇಮಕ | ಇಲ್ಲ | 2018 | ರೂ. 1000/- | - | 0055-00-103-0-03 |

| | | | | | | |
|---|---|---|---|---|---|---|
| 4. | ಅಂಕಪಟ್ಟಿ, ಜನನ ಮತ್ತು ಮರಣ ಪ್ರಮಾಣ ಪತ್ರ ಹಾಗೂ ದಾಖಲೆಗಳ ನೈಜತೆಯ ದೃಢೀಕರಣ | ರೂ. 100/– ರೂ. 5/– (Court Fee Stamp paid) | 2004 | ರೂ.300/– ರೂ.10/– (Court Fee Stamp paid) | 200% | 0070-60-800-3-03 0030-01-101-0-01 (Court Fee Stamp paid) |
| 5. | ಅಮೇರಿಕಾ ದೇಶಕ್ಕೆ ಸಂಬಂಧಿಸಿದಂತೆ ಭಾರತೀಯರಿಗೆ No Obligation to Return to India ಪ್ರಮಾಣ ಪತ್ರ ನೀಡುವ ವಿಷಯ | ರೂ.500/– | 2004 | ರೂ. 5000/– | 900% | 0055-00-103-0-03 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 151 ವೆಚ್ಚ 11/18, ದಿನಾಂಕ: 28.03.2018ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

V. Susheela

(ವಿ. ಸುಶೀಲ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ರಹದಾರಿ ಮತ್ತು ವಿದೇಶಿಯರು)
ಇ-ಮೇಲ್ : uspf-home@karnataka.gov.in

V. Susheela
ವಿ. ಸುಶೀಲ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ರಹದಾರಿ ಮತ್ತು ವಿದೇಶಿಯರು)
ವಿಧಾನಸೌಧ, ಬೆಂಗಳೂರು-560 001

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ರವರಿಗೆ ಮುಂದಿನ ರಾಜ್ಯ ಪತ್ರದ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಹಾಗೂ ಒಳಾಡಳಿತ ಇಲಾಖೆ (ರಹದಾರಿ ಮತ್ತು ವಿದೇಶಿಯರು) ವಿಭಾಗಕ್ಕೆ 100 ಪ್ರತಿಗಳನ್ನು ಒದಗಿಸುವಂತೆ ಸೂಚಿಸಲಾಗಿದೆ.

**ಪ್ರತಿಗಳು:**

1. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ.
3. ಪೊಲೀಸ್ ಮಹಾ ನಿರೀಕ್ಷಕರು (ರಾಜ್ಯ ಗುಪ್ತವಾರ್ತೆ), ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
5. ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು.
6. ರಾಜ್ಯದ ಎಲ್ಲಾ ಪೊಲೀಸ್ ಅಧೀಕ್ಷಕರು.
7. ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಮತ್ತು ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ (ಕಾನೂನು & ಸುವ್ಯವಸ್ಥೆ), ಒಳಾಡಳಿತ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸೇವೆಗಳು), ಒಳಾಡಳಿತ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿ (ಸಮನ್ವಯ) ಒಳಾಡಳಿತ ಇಲಾಖೆ.